ಕರ್ನಾಟಕ ವಿಧಾನ ಸಭೆ

ಕರ್ನಾಟಕ ವಿಧಾನ ಮಂಡಲದ ಕಾರ್ಯಾಲಯ

ವಿಧಾನಮಂಡಲದ ಉಭಯ ಸದನಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತವರದಿ.

ಕರ್ನಾಟಕದ ರಾಜ್ಯಪಾಲರಾದ ಶ್ರೀ ಅಶೋಕನಾಥ ಬ್ಯಾನರ್ಜಿಯವರು ಬೆಳಿಗ್ಗೆ ೧೧-೫೦ ಘಂಟೆಗೆ ವಿಧಾನ ಸೌಧದಲ್ಲಿರುವ ವಿಧಾನ ಸಭಾಸದನದಲ್ಲಿ ಸಮಾವೇಶಗೊಂಡ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣ.

ಗುರುವಾರ ದಿನಾಂಕ ೨೯ನೇ ಜನವರಿ ೧೯೬೨

ರಾಜ್ಯಪಾಲರು ಬೆಳಿಗ್ಗೆ ೧೧-೫೦ ಗಂಟೆಗೆ ವಿಧಾನಸೌಧದ ಪೂರ್ವದ್ವಾರದ ಬಳಿ ಇರುವ ದ್ವಾರ ಮಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಆವರನ್ನು ಮಾನ್ಯ ಅಧ್ಯಕ್ಷರವರು, ಮಾನ್ಯ ಸಭಾಪತಿಯವರು ಮತ್ತು ವಿಧಾನ ಮಂಡಲದ ಕಾರ್ಯದರ್ಶಿಯವರು ಸ್ವಾಗತಿಸಿದರು. ನಂತರ ಪೂರ್ವಭಾಗದಲ್ಲಿರುವ ಲಿಫ್ಟ್‌ಗೆ ರಾಜ್ಯಪಾಲರನ್ನು ಕರೆದೊಯ್ಯಲಾಯಿತು. ಮೊದಲನೆಯ ಮಹಡಿಯಲ್ಲಿ ಲಿಫ್ಟ್ ನಿಂದ ಹೊರಬಂದ ಬಳಿಕ, ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಕಾರ್ಯದರ್ಶಿಯವರು

ಮಾನ್ಯ ಅಧ್ಯಕ್ಷರು — ಮಾನ್ಯ ಸಭಾಪತಿಯವರು

ರಾಜ್ಯಪಾಲರು

ಎ. ಡಿ. ಸಿ.

ಈ ರೀತಿಯ ಮೆರವಣಿಗೆಯು ವಿಧಾನಸಭಾ ಸದನದ ಕಡೆಗೆ ಹೊರಟಿತು. ಸಭಾಸದನದ ದ್ವಾರದ ಬಳಿ ಮೆರವಣಿಗೆ ಬಂದಕೂಡಲೆ, ರಾಜ್ಯಪಾಲರ ಆಗಮನವನ್ನು ಮಾರ್ಷಲ್ ಆವರು ಸಭೆಗೆ ತಿಳಿಸಿದರು. ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರು ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ, ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿದ್ದರು.

ಮೆರವಣಿಗೆಯು ಸಭಾಸದನದ ವೇದಿಕೆಯ ಮುಂದೆ ಬಂದಬಳಿಕ ಇಬ್ಭಾಗವಾಯಿತು. ವೇದಿಕೆಯ ಮೇಲೆ ಮಾನ್ಯ ಅಧ್ಯಕ್ಷರವರು ರಾಜ್ಯಪಾಲರ ಬಲಭಾಗದಲ್ಲಿಯೂ, ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತುಕೊಂಡರು. ರಾಜ್ಯಪಾಲರು ವೇದಿಕೆಯ ಮಧ್ಯ ಭಾಗದಲ್ಲಿರುವ ಆಸನದಲ್ಲಿ ಕುಳಿತುಕೊಂಡರು ಮತ್ತು ಕಾರ್ಯದರ್ಶಿಯವರು ವೇದಿಕೆಯ ಮುಂದುಗಡೆ ಇರುವ ಆಸನದಲ್ಲಿ ಕುಳಿತುಕೊಂಡರು.

H. E. The Governor.—Ladies and Gentlemen, usually people apologise for having come late, But this is one occasion where I have to apologise for having come early. I am sorry for the inconvence.

ಸಭಾಪತಿಗಳೇ, ಸಭಾಧ್ಯಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೇ, ರಾಜ್ಯ ವಿಧಾನಮಂಡಲದ ಈ ಅಧಿವೇಶನಕ್ಕೆ ತಮ್ಮನ್ನು ಸ್ವಾಗತಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ. ತಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇನೆ.

2. After four consecutive years of poor monsoon and conditions of severe drought in large parts of the State, the year which has just gone by, saw generlly favourable seasonal conditions. Though some anxiety was caused by prolonged dry speils, the major part of the State received avrage or above average rainfall. The spatial distribution was not, however, uniform. In several districts, some pockets had poor rainfall. Strangely, it was the turn of the Malnad districts this time to suffer on account of insufficint precipition. In spite of these limitations, the crop production in the State promises to be by and large satisfactory. Tanks to good late rains, the rabi prospects are bright . My Government has taken prompt action to provide assitance in the areas effected by indiquate rains. In the paddy growing belt of the Malnad mini-kits have been distributed free to the small and marginal farmers. In the dry areas, the tempo of employment generation programmes is being maintained and arrangements have been made for fodder and drinking water.

3. Karnataka has always been know for peace and tranqulity and for communal harmony. But this reputation got sullied during the year, following the unfortunate publication of a story in a news paper which upset the feelings of a section of the community. Bangalore, Mysore and Tumkur witnessed violent incidents in volving damage to public and private property, The police had to oPen fire resuiting in loss of human lives. It was disheartening that these incidents should have taken a communal turn in Mysore a city in which such incidents had not been known for the last 50 years.

(INTERRUPTIONS)

(Several Members from the Oppostion Benches rose in their seats and spoke together)

SRI HAJEE ABDUL SATHAR SAIT : —It is a shame...

SRI MOHAMED LAIKUDDIN:—It is unfortunate that...

SRI MUKTHARUNNISA BEGUM. It is a shame on the part of the Government.

SRI MOHAMED LAIKUDDIN.—the atrocities.....

(INTERRUPTIONS)

These unfortunte events clearly bring out that even after nearly four decades of independence, amitya among the diffrent sections of the community cannot be taken for granted. It is still rather fragile and therfore reqireres to be carefully nurtured. This casts a big responsiblity on the leaders of all communities and also on the political parties. I am sure that the peple of

Karnataka will display maturity and tolerance in their behaviour and ensure that the human and material resources of the State are channelised towards growth and development and not frittered away in factional disputes.

4. My Government has fulfilled its promise of ushering in panchayat Raj in its true sense, with democratically elected institutio at different levels enjoying vast powers and autonomy. We have just had the first ever elections to Zilla parishads and Mandal panchayats. Let me offer my congrtulations to the nearly two crore voters of Karnataka for the peaceful conduct of the elections by and large.

(INTERRUPTIONS)

SRI T. N. NARASIMHA MURTHY.—It is all false.

SRI D.B. KALMANKAR.—It is a same on the part of this Government. All types of currupt practices have been practised by the Government.

(INTERRUPTIONS)

Their voting behavior in these and other recent elections show an encouraging growth of political maturity of the ordinary citizen. It holds out the hope that our democratic system now has a solid foundation. In establshing the new pattern of panchayat Raj, my Government has been inspried by loknayak Jayaprakash Narayan's ideal of decentralised democrocy. Thus, the Zilla parishads have been designed to function as Governments in minia ture in their respective areas. They have been vested with wide ranging functions. for the discharged of which, there will be comm ensurate transfer of financial resources,

5. The Mandal Panchayats, which will have their feet closer to the ground, are designed to respond quickly and effectively to local needs and requirements. Apart from discharging traditional functions such as looking after village sanitation, licensing of new constructions, etc, they will enjoy an autonmous role in a veriety of development programmes affecting their areas. The process of planning will take a new dimension with the coming into exitence of Zilla Parishads and mandal panchayats. We have been talking for many years of planning from below, We expect this to become a reality in Karnataka with the ushering in of Panchayat Raj.

6. A major event during the year has been the holding of the Second Summit Confrence of the South Assian Association for Regional Co-operation in Bangalore last November. Seven Heads of states and Government encompassing a si zeable proportion of the global population assembled here to discuss regional and

belateral issues. Karnataka is proud to have played host to this major Internatinal Confrence. we feel particularly gratified by the appreciation expressed by our prime minister and other visiting dignitaries of the arrangements made by the State Government. I am sure that this event signifies the emergence of Bangalore as a Centre for international events.

H. E. THE GOVERNOR : I would also congratulate the people of Bangalore for being so friendly to our guests on that occasion

7. My Government's primimary concern, as always, has been with the alround development of the State. I am happy to inform the Hon'ble Members that according to the latest avilable analysis of the ministry of programme Implementation, Government of India Karnataka stood fifth among all the States in the implementation of the 20 point Programme for the period April-November, 1986. The progress recorded on the anti poverty programmes has been in line with the agreed targets. Even in respect of one or two schemes where the progress has been slow in the early port of the year, shortfall is expected to be made up by the end of the finaci at year. As is well known, my Government has been Paying special attention to the problems of the rural ares and of the poorer and vulnerable segments of the society. In the last three years, a wide variety of programmes has been introduced by Government for their welfare. Since you are familiar with them, I shall not take your time repeating them. I shall only highlight a few areas in which there have been significant developments in the recent months:—

(a) As Hon'ble Members will recall, a scheme of supplying subsidised foodgrains to the rural poor was launched on st November, 1985. Initially the coverage was 24 lakh families. As representations were made that some deserving families had been left out, a fresh survey was carried out and the benefit of the scheme has been extended to another 7 lakh families. All plantation labourers have been brought within the purview of this scheme. With the consequent expansion all over the State of the public distribution system, the monthly offtake has exceeded 60,000 tonnes. We are thankful to Government of India for enabling us to sustain this system by giving an increased allotment of foodgrains. I should also mention that even though the sale price of foodgrains has been raised by Government of India, my Government has maintained unchanged the selling price to the rural poor.

(b) Karnataka's achievement in rural drinking water supply has been impressive. All the so-called problem villages identified prior to the Sixth Plan have been covered. We are now in the Process of extending this concept to habitations. We are also

laying increased emphasis on mini-schemes and piped water supply schemes so as to minimise the problem of water scarcity even during years of acute drought. I am glad to inform that Gulbarga District has been included in the first set of districts selected by Government of India to be covered by the Technology Mission which they have set up to tackle the problem of drinking water. More districts are expected to come under this programme in the coming years.

(c) In spite of financial stringency, the tempo of the schemes to provide sites to siteless families and to construct low cost houses under the Janatha Housing Scheme has been maintained Till the end of 1986, 14,57,343 families whose annual income does not exceed Rs. 2,000-have been identified as siteless in the State. Of these, as many as 13,29,519 have been given sites. Under the Janatha Housing Scheme, 4,78,591 houses have been completed. In the current year, the total number of houses being completed under this scheme will be around 50,000.

(d) It would be recalled that in order to infuse a sense of unity and equality among children in their formative age and to encourage children from poor families to attend school, Government introduced the Vidya Vikas Scheme from 1985-86. Under his scheme, 107 lakh children have been provided text books and 46 lakh children have been given uniforms free of cost. This scheme has received general acclaim.

(e) The Dryland Development scheme to which my Government attaches importance on account of the high proportion of non irrigated area in the State, has picked up momentum. The work has been taken up in selected water sheds in every district. Inter-disciplinary teams are in position. Programmes of soil and moisture conservation, crop husbandry, afforestation and horticulture are being taken up in a systematic and integrated manner. The early results are encouraging and hold out the hope that it would be possible to insulate the dryland farmers from the vagaries of the monsoon to some extent.

(f) The Second University of Agricultural Sciences has been established at Dharwar with effect from 1st October, 1986. This University will focus attention on the problems of development in agriculture and allied fields in Northern Karnataka, especially of the black soil areas which characterise this part of the State.

(g) Irrigation projects continued to receive Government's top priority. The irrigation potential created by the end of March, 1986 was 25.73 lakh hectares made up of 12.22 lakh hectares under major and medium irrigation projects and the balance under minor irrigation including ground water. Supply during 1986-87, a potential of 65,000 hectares under major and medium irrigation

and 5,000 hectares under minor irrigation with a total outlay of Rs. 221.2 crores is projected. All efforts are being made to achieve this target.

(h) Karnataka has been in the forefront in social forestry programmes, which are intended to meet the needs of fuel, fodder and small timber of the rural population. We are pooling funds available under the Plan programmes of the foresty sector and anti-poverty programmes such as NREP and RLEGP, During the current year, as many as 34 crore seedlngs will be raised. There is now a deliberate effort to involve the local communities through farmers' groups, Mahila Mandals, schools, etc. Thus, in the current year 20 crore seedlings will be raised in the decentralised sector. Government will soon be introducing innovative schemes, under which landless labourers and small and marginal farmers will be provided financial assistance in the shape of loan and subsidy to raise trees on C and D class lands, which have been transferred to the Forest Department, Voluntary organisations and Co-operative Societies will also be encouraged to play a greater role in tree planting activities.

(i) A major step forward in settling pending disputes relating to Land Reforms has been the setting up of Appellate Tribunals at the District level. In suce of the districts where the pendency is high, additional Tribunals have been sanctioned. It is expected that the establishment of these Tribunals will help in early settlement of cases remanded by the High Court. The Karnataka Land Reforms Act, It may be recalled, was amended to enable payment of compensation to the farmer landlords in the shape of National Savings Certificates instead of bonds. I am glad to inform the Hon'ble Members that payment of compensation through National Savings Certificates has started.

(j) Karnataka has recorded commendable performance in the Family Welfare Programme. For the year 1985-86, with the achievement exceeding the target, the State was awarded a prize of Rupees One Crore on this account. During the current year also, satisfactory progress Is being maintained. The supply of drugs especially to the rural dispensaries and health centres has considerably improved during the last one year. An intensive programme of immunisation of children has been taken up in five districts.

(k) The minimum wages in a number of employments have been revised in keeping with increased cost of living

(INTERUPTIONS)

SRI M.S. KRISHNAN.—It is all bogus, Number of factories have been closed.

(INTERUPTIONS)

These revisions have stood the test of judicial scruitiny and are being implemented. I am glad to say that, on the whole, industrial relations have been good during the year. Credit must be given to the contribution made by the Labour Department through timely intervention and quick settlement of disputes.

7. As a part of the effort to assist the poor litigant to press his case before various judicial authorities, the system of Legal Aid has now been established all over the State. A start was made this year on Lok Adalats which settle certain categories of disputes quickly and with minimum cost to the litigants.

8. As announced at the time of the budget last year, a new procedure has been introduced this year of pooling the provisions in the different sectors for the Special Component Plan, which is intended for the benefit of Scheduled Castes. This procedure has the merit not only of enabling stricter monitoring of the expenditure under the Special Component Plan, but gives greater flexibility in operation. Another innovation introduced during the year has been to adopt an area-based project approach where possible; the objective is to make maximum impact in selected clusters of villages having a relatively high proportion of Scheduled Castes population. The outlay under the Tribal Sub-Plan has been more than doubled during the current year. It is expected that this sharply increasing trend will continue next year also.

9. Action has already been taken on the recommendations of the first interim report of the Minorities Commission. Minorities Development Corporation has been established

(Interruptions)

Sri Mohammed Laykuddin.—It is all bogus.....

(Interruptions)

The Minorities Commission has just submitted its Second Report and the recommendations are under examination. In order to monitor the implementation of the safeguards provided to linguistic and religious minorities, a Cabinet Sub-Committee under the Chairmanship of the Chief Minister has been constituted.

10. As Hon'ble Members are aware, the Second Backward Classes Commission submitted its report a few months ago. Unfortunately, the approach and recommendations of Commission could not find acceptance. Government have passed interim orders for reservations for backward classes in educational institutions and

Government service. The entire posit on is to be reviewed. My Government would like to assure that it will fully protect the interests of all the backward sections of the society.

(Interruptions)

11. As I said a little while ago, the monsoons were generally good last year. Unfortunately the catchment areas of the two major hydro-reservoirs of the State, Sharavathi and Kalinadi, did not receive normal rainfall. As a result, there will be a shortfall of nearly 2,000 million units in hydro generation in the current year. The Second Unit of 210 MW at Raichur Thermal Power Station has not fully stabilised. We are receiving substantial assistance from Central Power Stations as well as from neighbouring States. Even than, there is a large gap between electrceity demand and supply and it has become unavoidable to continue power cuts. I should add, however, that there has been no slow down in the energisation of pumpsets. Several of our proposals for augmenting power generation in the State have been lying with Government of India for a long time. There is some indication that two schemes based on diesel generating sets or gas turbines are likely to be cleared, but as yet there is no official intimation.

12. The brunt of the power cut has had to be borne by Industry. Government have tried to alleviate the position by offering reliefs on captive power generation; this has helped to some extent. As Hon'ble Members are aware, two key elements in the industrial policy of my Government are discouragement of new power-intensive industries and dispersal of industry to different parts of the State. Besides encouraging small scale industry, graded incentives are being offered to new enterpreneurs. I must say that while progress in the establishment of small scale industries has been satisfactory, we have still a long way to go before one can feel satisfied that there is an even spread of industry in different parts of the State.

13. Good progress has been made in the introduction of Kannada in administration. The use of Kannada in the preparation of notes and in correspondence is widespread in the offices at the district and lower levels. Even at the State headquarters, except where the use of English is mandatory to meet constitutional or legal requirements, there has been a rapid progress in the use of Kannada. Currently, the revision and simplification of departmental glossaries is in progress. A large number of State Act have already been translated into Kannada, while new bills are being drafted in original in Kannada itself Government propose to complete the process of replacement of English typewriters by Kannada typewriters in the coming year.

14. My Government's interest in the well-being of its employees does not require reiterations. Apart from substantial reliefs and concessions announced in the last budget, Government had constituted the Third Pay Commission. The Commission has since submitted its report. Government have generally accepted the recommendations of the Commission and will implement them from the first of January this year. As could be expected, certain tadres of employees have not been satisfied with the recommencations of the Commission, specally where their position relative do other cadres has been affected. Government will constitute an official Committee to look into these representations, Even though the recommendations of the Pay Commission impose a heavy financial burden on the State Government, there hass been no loss of time in accepting the recommendation of the Commission. Government expect in turn that the employees will putforth their best effort in the discharge of their duties and service to the people of Karnataka,

15. Hon'ble Members, I have now come to the end of my address. The Budget Session of Legislature always has a heavy agenda. Apart from the passing of the budget, you will be considering a number of legislative matters. I am sure that both care and expedition will characterise your deliberations.

16. ಮುಂಬರುವ ಅಧಿವೇಶನದಲ್ಲಿ ನಿಮಗೆ ಸಂಪೂರ್ಣ ಯಶಸ್ಸು ದೊರೆಯಲೆಂದು ನಾನು ಆರೈಸುತ್ತೇನೆ.

(ಸಭೆಯು ೧೧ ಗಂಟೆ ೨೫ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ೧೧ ಗಂಟೆ ೫೫ ನಿಮಿಷಕ್ಕೆ ಸೇರಲು ತೀರ್ಮಾನಿಸಿತು.)

ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡ ರೂಪಾಂತರ

ಸಭಾಪತಿಗಳೇ, ಸಭಾಧ್ಯಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೇ,

ರಾಜ್ಯ ವಿಧಾನಮಂಡಲದ ಈ ಜಂಟಿ ಅಧಿವೇಶನಕ್ಕೆ ತಮ್ಮನ್ನು ಸ್ವಾಗತಿಸಲು ನನಗೆ ತುಂಬ ಸಂತೋಷವಾಗುತ್ತದೆ. ತಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇನೆ.

೨. ನಾಲ್ಕು ನಿರಂತರ ವರ್ಷಗಳ ಕಾಲ ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಮಳೆ ತೃಪ್ತಿಕರವಾಗಿರಲಿಲ್ಲ ಮತ್ತು ತೀವ್ರ ಕ್ಷಾಮ ಪರಿಸ್ಥಿತಿಯಿತ್ತು. ಇದೇ ಕೊನೆಗೊಂಡ ವರ್ಷದಲ್ಲಿ ಋತುಮಾನವು ಸಾಮಾನ್ಯವಾಗಿ ಅನುಕೂಲಕರವಾಗಿತ್ತು. ಮಧ್ಯೆ ದೀರ್ಘಕಾಲದವರೆಗೆ ಮಳೆ ಬೀಳದ ಕಾರಣ ಕಾತರ ಉಂಟಾಗಿದ್ದರೂ ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಸರಾಸರಿ ಅಥವಾ ಸರಾಸರಿಗಿಂತಲೂ ಹೆಚ್ಚು ಮಳೆ ಬಂತಾಗಿದೆ. ಆದರೂ ಪ್ರಾದೇಶಿಕವಾಗಿ ಮಳೆಯ ವಿತರಣೆ ವಿಕ ರೀತಿಯಾಗಿರಲಿಲ್ಲ. ಅನೇಕ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕಡಿಮೆ ಮಳೆಯಾಗಿತ್ತು. ಈ ಸಲ ಸಾಕಷ್ಟು ಮಳೆಯಾಗದ ಕಾರಣ ಅನಿರೀಕ್ಷಿತವಾಗಿ ಮಲೆನಾಡು ಜಿಲ್ಲೆಗಳು ತೊಂದರೆಗೀಡಾಗಬೇಕಾಯಿತು. ಇಂಥ ಪರಿಮಿತಿಗಳಿದ್ದರೂ ಸಹ ರಾಜ್ಯದಲ್ಲಿ ಬೆಳೆ ಉತ್ಪಾದನೆ ತೃಪ್ತಿಕರವಾಗಿದೆಯೆನ್ನಬಹುದು. ಮಳೆಗಾಲದ ಅಂತ್ಯದಲ್ಲಿ ಉತ್ತಮ ಪ್ರಮಾಣದಲ್ಲಾಗಿರುವ ಮಳೆಯ ಕಾರಣದಿಂದಾಗಿ ಹಿಂಗಾರು ಬೆಳೆ ಆಶಾದಾಯಕವಾಗಿದೆ. ಸಾಕಷ್ಟು ಮಳೆ ಬೀಳದ ತೊಂದರೆಗೊಳಗಾದ ಪ್ರದೇಶಗಳಿಗೆ ಸಹಾಯವನ್ನು ಒದಗಿಸುವಲ್ಲಿ ನನ್ನ ಸರ್ಕಾರವು ಸಕಾಲಿಕ ಕ್ರಮ ಕೈಗೊಂಡಿದೆ. ಮಲೆನಾಡಿನ ಬತ್ತ ಬೆಳೆಯುವ ಪ್ರದೇಶದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಉಪಕರಣ ಸಾಮಗ್ರಿಗಳುಳ್ಳ ಮಿನಿಕಿಟ್‌ಗಳನ್ನು ಉಚಿತವಾಗಿ ಹಂಚಲಾಗಿದೆ. ಒಣ ಪ್ರದೇಶಗಳಲ್ಲಿ ಉದ್ಯೋಗ ಸೃಜಿಸುವ ಕಾರ್ಯಕ್ರಮದ ಗತಿಯನ್ನು ನಿರ್ವಹಿಸಿಕೊಂಡು ಬರಲಾಗುತ್ತಿದೆ. ಮೇವು ಹಾಗೂ ಕುಡಿಯುವ ನೀರಿಗಾಗಿ ವ್ಯವಸ್ಥೆಗಳನ್ನು ಮಾಡಲಾಗಿದೆ.

೩. ಕರ್ನಾಟಕವು ಶಾಂತಿ ನೆಮ್ಮದಿಗಳಿಗಾಗಿ ಹಾಗೂ ಮತೀಯ ಸಾಮರಸ್ಯಕ್ಕಾಗಿ ಯಾವಾಗಲೂ ಪ್ರಸಿದ್ಧವಾಗಿದೆ. ದುರದೃಷ್ಟವಶಾತ್ ವೃತ್ತಪತ್ರಿಕೆಯೊಂದರಲ್ಲಿ ಪ್ರಕಟವಾದ ಕತೆಯು ಒಂದು ಕೋಮಿನವರ ಭಾವನೆಗಳನ್ನು ಕೆರಳಿಸಿದ್ದು ಕರ್ನಾಟಕದ ಈ ಖ್ಯಾತಿಗೆ ಕಲಂಕ ತಟ್ಟಿತು. ಬೆಂಗಳೂರು, ಮೈಸೂರು ಮತ್ತು ತುಮಕೂರುಗಳಲ್ಲಿ ಹಿಂಸಾತ್ಮಕ ಘಟನೆಗಳು ಸಂಭವಿಸಿ, ಸಾರ್ವಜನಿಕ ಮತ್ತು ಖಾಸಗಿ ಆಸ್ತಿಪಾಸ್ತಿಗಳಿಗೆ ಹಾನಿಯುಂಟಾಯಿತು. ಪೋಲೀಸರು ಗುಂಡು ಹಾರಿಸಬೇಕಾದ ಸಂದರ್ಭ ಒದಗಿ ಮಾನವ ಪ್ರಾಣಹಾನಿಗೆ ಕಾರಣವಾಯಿತು, ಈ ಘಟನೆಗಳು ಮೈಸೂರಿನಲ್ಲಿ ಮತೀಯ ವಿದ್ವೇಷಕ್ಕೆ ಎಡೆ ಮಾಡಿಕೊಟ್ಟ ವಿಷಯ ವಿಷಾದಕರವಾಗಿದೆ. ಕಳೆದ ೫೦ ವರ್ಷಗಳ ಅವಧಿಯಲ್ಲಿ ಈ ನಗರದಲ್ಲಿ ಇಂಥ ಘಟನೆಗಳು ನಡೆದುದು ಯಾರೂ ಕಂಡುಕೇಳರಿಯದ ವಿಷಯ. ಸ್ವಾತಂತ್ರ್ಯ ಪಡೆದ ಸುಮಾರು ನಾಲ್ಕು ದಶಕಗಳ ತರುವಾಯವೂ ವಿವಿಧ ಕೋಮುಗಳ ನಡುವೆ ಮೈತ್ರಿಭಾವನೆಯಿದೆಯೆಂದು ಭಾವಿಸುವಂತಿಲ್ಲ ಎಂಬುದನ್ನು ಈ ದುರದೃಷ್ಟಕರ ಘಟನೆಗಳು ಸ್ಪಷ್ಟಪಡಿಸುತ್ತವೆ. ಈಗಲೂ ಈ ಭಾವನೆಯ ದಾರ್ಢ್ಯತೆ ಕಡಿಮೆ ಇರುವ ಕಾರಣ ಇದನ್ನು ಆತಿ ಜಾಗರೂಕತೆಯಿಂದ ಪೋಷಿಸಿಕೊಂಡು ಬರಬೇಕಾಗಿದೆ. ಇದರ ಬಗ್ಗೆ ಎಲ್ಲ ಕೋಮುಗಳ ಮುಖಂಡರು ಹಾಗೂ ರಾಜಕೀಯ ಪಕ್ಷಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕಾಗಿದೆ. ಕರ್ನಾಟಕದ ಜನತೆ, ಘನತೆ ಹಾಗೂ ಸಹನೆಯಿಂದ ನಡೆದುಕೊಳ್ಳುವರೆಂಬ ಭರವಸೆ ನನಗಿದೆ ಮತ್ತು ರಾಜ್ಯದ ಮಾನವ ಮತ್ತು ಭೌತಿಕ ಸಾಧನ ಸಂಪತ್ತುಗಳನ್ನು, ಬೆಳವಣಿಗೆ ಮತ್ತು ಅಭಿವೃದ್ಧಿಯ ಕಡೆ ಕೇಂದ್ರೀಕರಿಸುವರೆಂದು ಮತ್ತು ಸ್ವಾರ್ಥಪರ ವಿವಾದಗಳಲ್ಲಿ ಬಳಸಿಕೊಳ್ಳುವುದಿಲ್ಲವೆಂದು ನಾನು ನಂಬಿದ್ದೇನೆ.

೪. ವಿವಿಧ ಮಟ್ಟಗಳಲ್ಲಿ ಪೆಚ್ಚಿನ ಅಧಿಕಾರಗಳನ್ನು ಮತ್ತು ಸ್ವಾಯತ್ತತೆಯನ್ನು ಹೊಂದಿರುವ ಪ್ರಜಾಸತ್ತಾತ್ಮಕವಾಗಿ ಆಯ್ಕೆಗೊಂಡ ಸಂಸ್ಥೆಗಳ ಮೂಲಕ ಪಂಚಾಯತ್ ರಾಜ್ಯವನ್ನು ಅದರ ನಿಜವಾದ ಅರ್ಥದಲ್ಲಿ ರೂಪಿಸುವಂತಹ ತನ್ನ ವಚನವನ್ನು ನನ್ನ ಸರ್ಕಾರವು ಈಡೇರಿಸಿದೆ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಪ್ರಪ್ರಥಮ ಚುನಾವಣೆಗಳನ್ನು ನಾವು ನಡೆಸಿದ್ದೇವೆ. ಚುನಾವಣೆಗಳು ಬಹುತೇಕ ಶಾಂತಿಯುತವಾಗಿ ನಡೆಯಲು ಕಾರಣರಾದ ಕರ್ನಾಟಕದ ಸುಮಾರು ಎರಡು ಕೋಟಿ ಮತದಾರರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಚುನಾವಣೆಗಳಲ್ಲಿ ಮತ್ತು ಇತರ ಚುನಾವಣೆಗಳಲ್ಲಿ ಮತದಾನಕ್ಕೆ ಸಂಬಂಧಿಸಿದಂತೆ ಅವರು ತೋರಿಸಿರುವ ಪರ್ತನೆಯಿಂದ ಸಾಧಾರಣ ಪ್ರಜೆಯಲ್ಲೂ ರಾಜಕೀಯ ಪರಿಪೂರ್ಣತೆಯನ್ನು ಸಾಧಿಸುವ ದಿಶೆಯಲ್ಲಿ ಉತ್ತೇಜಕ ಬೆಳವಣಿಗೆ ಉಂಟಾಗಿದೆ ಎಂಬುದು ವ್ಯಕ್ತವಾಗುತ್ತದೆ. ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆಯು ಈಗ ಭದ್ರ ಬುನಾದಿಯೊಂದನ್ನು ಹೊಂದಿದೆ ಎಂಬ ಭರವಸೆಯನ್ನು ನೀಡುತ್ತದೆ. ಪಂಚಾಯತ್ ರಾಜ್ಯದ ಹೊಸ ಮಾದರಿಯನ್ನು ಸ್ಥಾಪಿಸುವಲ್ಲಿ ನನ್ನ ಸರ್ಕಾರವು ಲೋಕನಾಯಕ ಜಯಪ್ರಕಾಶ ನಾರಾಯಣರ ವಿಕೇಂದ್ರೀಕೃತ ಪ್ರಜಾಸತ್ತೆಯ ಕಲ್ಪನೆಯಿಂದ ಸ್ಫೂರ್ತಿ ಪಡೆದಿದೆ. ಈ ರೀತಿ ಸಂಬಂಧಪಟ್ಟ ಆಯಾ ಪ್ರದೇಶಗಳಲ್ಲಿ ಸರ್ಕಾರದ ಸೂಕ್ಷ್ಮ ಪ್ರತಿರೂಪವಾಗಿ ಕಾರ್ಯನಿರ್ವಹಿಸುವಂತೆ ಜಿಲ್ಲಾ ಪರಿಷತ್‌ಗಳನ್ನು ರೂಪಿಸಲಾಗಿದೆ. ಇವುಗಳಿಗೆ ವಿಸ್ತೃತ ಪ್ರಕಾರ್ಯಗಳನ್ನು ವಹಿಸಿಕೊಡಲಾಗಿದ್ದು ಅವುಗಳ ಕಾರ್ಯನಿರ್ವಹಣೆಗಾಗಿ ಸಮಪ್ರಮಾಣದಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಪರ್ಗಾಯಿಸಲಾಗುವುದು.

೫. ಮಂಡಲ ಪಂಚಾಯತ್‌ಗಳು ಸ್ಥಳೀಯ ಅವಶ್ಯಕತೆ ಮತ್ತು ಆಸಕ್ತಿಗಳನ್ನು ತೀವ್ರವಾಗಿ ಮತ್ತು ಪರಿಣಾಮಕಾರಿಯಾಗಿ ಈಡೇರಿಸುವಂತೆ ಅವುಗಳನ್ನು ಕಾರ್ಯಶೀಲ ಸಂಸ್ಥೆಗಳನ್ನಾಗಿ ರೂಪಿಸಲಾಗಿದೆ. ಗ್ರಾಮ ನೈರ್ಮಲ್ಯ, ಹೊಸ ಕಟ್ಟಡ ನಿರ್ಮಾಣಗಳಿಗೆ ಲೈಸೆನ್ಸ್ ನೀಡಿಕೆ, ಇತ್ಯಾದಿ ಸ್ಥಾಂಪ್ರದಾಯಿಕ ಕರ್ತವ್ಯಗಳನ್ನು ನಿರ್ವಹಿಸುವುದಲ್ಲದೆ ಇವುಗಳು ತಮ್ಮ ಪ್ರದೇಶಗಳಿಗೆ ಸಂಬಂಧಿಸಿದ ವಿವಿಧ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸ್ವಾಯತ್ತ ಪತ್ರವನ್ನು ವಹಿಸಲಿವೆ. ಜಿಲ್ಲಾ ಪರಿಷತ್‌ಗಳು ಮತ್ತು ಮಂಡಲ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬರುವುದರೊಂದಿಗೆ ಯೋಜನಾ ಕಾರ್ಯ ವಿಧಾನವು ಹೊಸ ರೂಪ ತಳೆಯಲಿದೆ. 'ಕೆಳ ಹಂತದಿಂದಲೇ ಯೋಜನೆಗಳನ್ನು ರೂಪಿಸುವ' ಬಗ್ಗೆ ನಾವು ಅನೇಕ ವರ್ಷಗಳಿಂದ ಹೇಳುತ್ತಲೇ ಬಂದಿದ್ದೇವೆ. ಪಂಚಾಯತ್ ರಾಜ್ಯದ ಪರಿಕಲ್ಪನೆಯು ಕರ್ನಾಟಕದಲ್ಲಿ ಇದನ್ನು ನನಸಾಗಿಸುವುದೆಂದು ನಾವು ನಿರೀಕ್ಷಿಸುತ್ತೇವೆ.

೬. ಕಳೆದ ನವೆಂಬರ್‌ನಲ್ಲಿ ದಕ್ಷಿಣ ಏಷಿಯನ್ ರಾಷ್ಟ್ರಗಳ ಪ್ರಾದೇಶಿಕ ಸಹಕಾರ ಸಂಘದ ಎರಡನೇ ಶೃಂಗ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಿರುವುದು ವರ್ಷದಲ್ಲಿ ನಡೆದ ಪ್ರಮುಖ ಘಟನೆಯಾಗಿದೆ. ವಿಶ್ವ ಜನಸಂಖ್ಯೆಯ ಗಣನೀಯ ಪ್ರಮಾಣವನ್ನು ಒಳಗೊಂಡಂಥ ಏಳು ರಾಷ್ಟ್ರಗಳ ಮತ್ತು ಸರ್ಕಾರಗಳ ಮುಖ್ಯಸ್ಥರು ಪ್ರಾದೇಶಿಕ ಮತ್ತು ಉಭಯ ಪಕ್ಷಗಳ ವಿಷಯಗಳನ್ನು ಚರ್ಚಿಸುವುದಕ್ಕಾಗಿ ಇಲ್ಲಿ ಸಭೆ ಸೇರಿದ್ದರು. ಈ ಪ್ರಮುಖ ಅಂತರಾಷ್ಟ್ರೀಯ ಸಭೆಗೆ ಆತಿಥ್ಯ ನೀಡುವ ಅವಕಾಶ ದೊರೆತ ಬಗ್ಗೆ ಕರ್ನಾಟಕವು ಅಭಿಮಾನ ತಳೆದಿದೆ. ನಮ್ಮ ಪ್ರಧಾನ ಮಂತ್ರಿಗಳು ಮತ್ತು ಭೇಟಿ ನೀಡಿದ ಇತರ

ಗಣ್ಯ ವ್ಯಕ್ತಿಗಳು ರಾಜ್ಯ ಸರ್ಕಾರವು ಮಾಡಿದ ವ್ಯವಸ್ಥೆಗಳಿಗಾಗಿ ವ್ಯಕ್ತಪಡಿಸಿದ ಮೆಚ್ಚುಗೆಯಿಂದಾಗಿ ನಾವು ಕೃತಾರ್ಥರಾಗಿದ್ದೇವೆ. ಈ ಘಟನೆಯಿಂದಾಗಿ ಅಂತರಾಷ್ಟ್ರೀಯ ವಿಶೇಷ ಸಂದರ್ಭಗಳಿಗಾಗಿ ಬೆಂಗಳೂರನ್ನು ಕೇಂದ್ರ ಸ್ಥಳವನ್ನಾಗಿ ಆಯ್ಕೆ ಮಾಡಬಹುದೆಂಬ ಭರವಸೆ ನನಗಿದೆ.

೭. ಎಂದಿನಂತೆ, ರಾಜ್ಯದ ಸರ್ವಾಂಗೀಣ ಬೆಳವಣಿಗೆ ನನ್ನ ಸರ್ಕಾರದ ಪ್ರಮುಖ ಆಸಕ್ತಿಯಾಗಿದೆ. ಭಾರತ ಸರ್ಕಾರದ ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯದಿಂದ ಇತ್ತೀಚೆಗೆ ದೊರೆತಿರುವ ವಿಶ್ಲೇಷಣೆಯ ಪ್ರಕಾರ, ೧೯೮೬ರ ಏಪ್ರಿಲ್‌ನಿಂದ ನವೆಂಬರ್‌ವರೆಗಿನ ಅವಧಿಗಾಗಿ ೨೦ ಅಂಶಗಳ ಕಾರ್ಯಕ್ರಮ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ರಾಜ್ಯಗಳ ಪೈಕಿ ಕರ್ನಾಟಕವು ಐದನೇ ಸ್ಥಾನ ಪಡೆದಿದೆಯೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಸಂತೋಷಪಡುತ್ತೇನೆ. ದಾರಿದ್ರ್ಯ ನಿರೋಧ ಕಾರ್ಯಕ್ರಮದ ಮೇರೆಗೆ ಸಾಧಿಸಿದ ಪ್ರಗತಿಯು ಒಪ್ಪಿಕೊಂಡಿರುವ ಗುರಿಗಳಿಗೆ ಅನುಸಾರವಾಗಿದೆ. ವರ್ಷದ ಮೊದಲ ಭಾಗದಲ್ಲಿ ಒಂದು ಅಥವಾ ಎರಡು ಪರಿಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಗತಿಯು ಮಂದಗತಿಯಲ್ಲಿತ್ತು. ಈ ಕೊರತೆಯನ್ನು ಆರ್ಥಿಕ ವರ್ಷದ ಕೊನೆಯೊಳಗೆ ಸರಿಪಡಿಸುವ ನಿರೀಕ್ಷೆಯಿದೆ. ನನ್ನ ಸರ್ಕಾರವು, ಗ್ರಾಮೀಣ ಪ್ರದೇಶಗಳು, ಆತಿ ಬಡವರು ಮತ್ತು ಸಮಾಜದ ದುರ್ಬಲ ವರ್ಗದವರಿಗಾಗಿ ವಿಶೇಷ ಗಮನ ನೀಡುತ್ತಾ ಬಂದಿದೆ ಎಂಬುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಕಳೆದ ಮೂರು ವರ್ಷಗಳಲ್ಲಿ ಈ ಜನರ ಕಲ್ಯಾಣಕ್ಕಾಗಿ ಸರ್ಕಾರವು ವಿವಿಧ ರೀತಿಯ ಕಾರ್ಯಕ್ರಮಗಳನ್ನು ಆರಂಭಿಸಿದೆ. ಅವುಗಳು ಯಾವುವೆಂದು ನೀವು ಚೆನ್ನಾಗಿ ತಿಳಿದಿರುವುದರಿಂದ ಅವುಗಳ ಬಗ್ಗೆ ಪುನಃ ಹೇಳುವುದಕ್ಕಾಗಿ ನಾನು ನಿಮ್ಮ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಇತ್ತೀಚಿನ ತಿಂಗಳುಗಳಲ್ಲಿ ಮಹತ್ವದ ಅಭಿವೃದ್ಧಿಗಳು ನಡೆದಂಥ ಕೆಲವು ಕ್ಷೇತ್ರಗಳ ಬಗ್ಗೆ ಮಾತ್ರ ಹೇಳಬಯಸುತ್ತೇನೆ :—

(ಎ) ಗ್ರಾಮೀಣ ಬಡಜನರಿಗೆ ನೆರವು ದರದಲ್ಲಿ ಆಹಾರ ಧಾನ್ಯಗಳನ್ನು ಸರಬರಾಜು ಮಾಡುವ ಪರಿಯೋಜನೆಯನ್ನು ನವೆಂಬರ್ ೧, ೧೯೮೫ರಿಂದ ಆರಂಭಿಸಲಾಯಿತೆಂಬುದನ್ನು ಮಾನ್ಯ ಸದಸ್ಯರು ನೆನಪಿಗೆ ತಂದುಕೊಳ್ಳಬಹುದು. ಆರಂಭದಲ್ಲಿ ಈ ಪರಿಯೋಜನೆಯನ್ನು ೨೪ ಲಕ್ಷ ಕುಟುಂಬಗಳಿಗೆ ಆನ್ವಯಿಸಲಾಯಿತು. ಕೆಲವು ಅರ್ಹ ಕುಟುಂಬಗಳನ್ನು ಬಿಟ್ಟುಬಿಡಲಾಗಿದೆಯೆಂಬ ಬಗ್ಗೆ ಮನವಿಗಳು ಬಂದುದರಿಂದ ಹೊಸದಾಗಿ ಸಮೀಕ್ಷೆ ನಡೆಸಲಾಯಿತು ಮತ್ತು ಈ ಪರಿಯೋಜನೆಯ ಪ್ರಯೋಜನವನ್ನು ಇನ್ನೂ ೭ ಲಕ್ಷ ಕುಟುಂಬಗಳಿಗೆ ಆನ್ವಯಿಸಲಾಗಿದೆ. ಎಲ್ಲ ಪ್ಲಾಂಟೇಷನ್ ಕಾರ್ಮಿಕರನ್ನು ಈ ಪರಿಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ರಾಜ್ಯದ ಎಲ್ಲಾ ಭಾಗಗಳಿಗೂ ಸಾರ್ವಜನಿಕ ವಿತರಣಾ ಪದ್ಧತಿಯನ್ನು ವಿಸ್ತರಿಸಿದ ಪರಿಣಾಮವಾಗಿ ಮಾಸಿಕ ಕೊಳ್ಳುವಿಕೆಯ ಪ್ರಮಾಣವು ೬೦,೦೦೦ ಟನ್‌ಗಳಿಗೂ ಮಿಗಿದೆ. ಅಧಿಕ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಹಂಚಿಕೆ ಮಾಡುವ ಮೂಲಕ ನಾವು ಈ ಪದ್ಧತಿಯನ್ನು ನಿರ್ವಹಿಸಿಕೊಂಡು ಬರಲು ಅನುವು ಮಾಡಿಕೊಟ್ಟಿದ್ದಕ್ಕಾಗಿ ಭಾರತ ಸರ್ಕಾರಕ್ಕೆ ನಾವು ಕೃತಜ್ಞರಾಗಿದ್ದೇವೆ. ಭಾರತ ಸರ್ಕಾರವು ಆಹಾರ ಧಾನ್ಯಗಳ ಮಾರಾಟ ಬೆಲೆಯನ್ನು ಹೆಚ್ಚಿಸಿದ್ದರೂ ಗ್ರಾಮೀಣ ಬಡಜನರಿಗೆ ಸಂಬಂಧಪಡುವಂತೆ ಮಾರಾಟದ ಬೆಲೆಯಲ್ಲಿ ನನ್ನ ಸರ್ಕಾರವು ಯಾವುದೇ ಬದಲಾವಣೆ ಮಾಡದೆ ಅದೇ ಬೆಲೆಯನ್ನು ಇಟ್ಟುಕೊಂಡು ಬಂದಿದೆಯೆಂದು ಹೇಳಬಯಸುತ್ತೇನೆ.

(ಬಿ) ಗ್ರಾಮೀಣ ಕುಡಿಯುವ ನೀರು ಪೂರೈಕೆಯಲ್ಲಿ ಕರ್ನಾಟಕದ ಸಾಧನೆ ನಿಜಕ್ಕೂ ಪರಿಣಾಮ ಕಾರಿಯಾದುದು. ಆರನೇ ಯೋಜನೆ ಮುಂಚೆ ಗುರ್ತಿಸಲಾದ ಎಲ್ಲಾ ಸಮಸ್ಯಾತ್ಮಕ ಗ್ರಾಮಗಳಿಗೆ ನೀರು ಪೂರೈಕೆ ಮಾಡಲಾಗಿದೆ. ಈಗ ಈ ಪರಿಕಲ್ಪನೆಯನ್ನು ಪಾಸಸ್ಥಳಗಳಿಗೂ ಅನ್ವಯಿಸುವ ಕಾರ್ಯದಲ್ಲಿ ತೊಡಗಿದ್ದೇವೆ. ಅಲ್ಲದೆ ತೀವ್ರ ಆಘಾತದ ವರ್ಷಗಳಲ್ಲೂ ನೀರಿನ ಕೊರತೆಯ ಸಮಸ್ಯೆಯನ್ನು ಕಡಿಮೆ ಮಾಡುವ ಸಲುವಾಗಿ ಸಣ್ಣ ಪರಿಯೋಜನೆಗಳಿಗೆ ಮತ್ತು ಕೊಳವೆ ನೀರು ಪೂರೈಕೆ ಪರಿಯೋಜನೆಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದೇವೆ. ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ರಚಿಸಿದ, ಟೆಕ್ನಾಲಜಿ ಮಿಷನಿನ ವ್ಯಾಪ್ತಿಗೆ ಒಳಪಡಿಸಲು ಭಾರತ ಸರ್ಕಾರವು ಆಯ್ಕೆ ಮಾಡಿದ ಜಿಲ್ಲೆಗಳ ಮೊದಲನೇ ತಂಡದಲ್ಲಿ ಗುಲ್ಬರ್ಗಾ ಜಿಲ್ಲೆಯನ್ನು ಸೇರಿಸಲಾಗಿದೆಯೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ಮುಂಬರುವ ವರ್ಷಗಳಲ್ಲಿ ಈ ಕಾರ್ಯಕ್ರಮದ ವ್ಯಾಪ್ತಿಗೆ ಇನ್ನೂ ಹೆಚ್ಚು ಜಿಲ್ಲೆಗಳನ್ನು ಒಳಪಡಿಸುವ ನಿರೀಕ್ಷೆಯಿದೆ.

(ಸಿ) ಋಣಕಾಸಿನ ಅಡಚಣೆಯಿದ್ದರೂ ನಿವೇಶನವಿಲ್ಲದ ಕುಟುಂಬಗಳಿಗೆ ನಿವೇಶನಗಳನ್ನು ಒದಗಿಸುವ ಮತ್ತು ಜನತಾ ವಸತಿ ಪರಿಯೋಜನೆಯ ಮೇರೆಗೆ ಕಡಿಮೆ ವೆಚ್ಚದ ಮನೆಗಳನ್ನು ನಿರ್ಮಿಸುವ ಪರಿಯೋಜನೆಗಳ ಗತಿಯನ್ನು ನಿರ್ವಹಿಸಿಕೊಂಡು ಬರಲಾಗಿದೆ. ೧೯೮೬ರ ಕೊನೆಯ ವರೆಗೆ ಪಾರ್ಷಿಕ ಪರಮಾನ ೨,೦೦೦ ರೂಪಾಯಿಗಳಿಗೆ ಮಿರಿರದ ೧೪,೫೬,೫೫೩ ಕುಟುಂಬಗಳನ್ನು

ನಿವೇಶನ ರಹಿತ ಕುಟುಂಬಗಳೆಂಬುದಾಗಿ ಗುರುತಿಸಲಾಗಿದೆ. ಇವುಗಳ ಪೈಕಿ ೧೩,೨೯,೫೧೯ ಕುಟುಂಬಗಳಿಗೆ ನಿವೇಶನಗಳನ್ನು ಹಂಚಲಾಗಿದೆ. ಜನತಾ ವಸತಿ ಪರಿಯೋಜನೆಯ ಮೇರೆಗೆ ೪,೭೮,೫೯೧ ಮನೆಗಳ ನಿರ್ಮಾಣ ಕೆಲಸವನ್ನು ಪೂರ್ಣಗೊಳಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ಈ ಪರಿಯೋಜನೆಯ ಮೇರೆಗೆ ಒಟ್ಟು ೫೧,೦೦೦ ಮನೆಗಳನ್ನು ಪೂರ್ಣಗೊಳಿಸಲಾಗುತ್ತಿದೆ.

(ಡಿ) ಮಕ್ಕಳ ಬೆಳವಣಿಗೆಯ ಪರಿಸ್ಥಿತಿಯಲ್ಲಿ, ಅವರಲ್ಲಿ ಏಕತೆ ಮತ್ತು ಸಮಾನತೆಯ ಅರಿವನ್ನು ರೂಢಿಸುವುದಕ್ಕಾಗಿ ಮತ್ತು ಬಡ ಕುಟುಂಬಗಳ ಮಕ್ಕಳು ಶಾಲೆಗೆ ಹೋಗುವುದನ್ನು ಪ್ರೋತ್ಸಾಹಿಸುವುದಕ್ಕಾಗಿ ಸರ್ಕಾರವು ೧೯೮೫-೮೬ ರಿಂದ ವಿದ್ಯಾವಿಕಾಸ ಪರಿಯೋಜನೆಯನ್ನು ಆರಂಭಿಸಿತೆಂಬುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದಾಗಿದೆ. ಈ ಪರಿಯೋಜನೆಯ ಮೇರೆಗೆ ೧೦೭ ಲಕ್ಷ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಒದಗಿಸಲಾಗಿದೆ ಮತ್ತು ೪೬ ಲಕ್ಷ ಮಕ್ಕಳಿಗೆ ಸಮವಸ್ತ್ರಗಳನ್ನು ಉಚಿತವಾಗಿ ನೀಡಲಾಗಿದೆ. ಈ ಪರಿಯೋಜನೆಯು ಸರ್ವರಿಂದಲೂ ಮೆಚ್ಚುಗೆ ಪಡೆದಿದೆ.

(ಇ) ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವ ನೀರಾವರಿಯಾಗದ ಪ್ರದೇಶವನ್ನು ದೃಷ್ಟಿಯಲ್ಲಿರಿಸಿಕೊಂಡು ಖುಷ್ಕಿ ಜಮೀನು ಅಭಿವೃದ್ಧಿ ಕಾರ್ಯಕ್ರಮಕ್ಕೆ ನನ್ನ ಸರ್ಕಾರವು ಪ್ರಾಮುಖ್ಯತೆ ನೀಡುತ್ತಿದ್ದು, ಈ ಕಾರ್ಯಕ್ರಮಕ್ಕೆ ಶೀಘ್ರ ಚಾಲನೆ ದೊರೆತಿದೆ. ಪ್ರತಿ ಜಿಲ್ಲೆಯಲ್ಲಿ ಆಯ್ಕೆ ಮಾಡಿದ ಜಲಾನಯನ ಪ್ರದೇಶಗಳಲ್ಲಿ ಈ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ವಿವಿಧ ಶಾಖೆಗಳ ಪರಿಣತರನ್ನು ಒಳಗೊಂಡ ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ. ಭೂಸಾರ ಮತ್ತು ತೇವ ಸಂರಕ್ಷಣೆ, ಬೆಳೆ ವ್ಯವಸಾಯ, ವನ ನಿರ್ಮಾಣ ಮತ್ತು ತೋಟಗಾರಿಕೆಯ ಕಾರ್ಯ ಕ್ರಮಗಳನ್ನು ವ್ಯವಸ್ಥಿತ ಮತ್ತು ಸಮಗ್ರ ರೀತಿಯಲ್ಲಿ ಕೈಗೊಳ್ಳಲಾಗುತ್ತಿದೆ. ಆರಂಭದ ಫಲಿತಾಂಶವು ಉತ್ತೇಜನಕಾರಿಯಾಗಿದ್ದು ಖುಷ್ಕಿ ಜಮೀನು ರೈತರಿಗೆ ಮಳೆಯ ಅನಿಶ್ಚಿತತೆಯಿಂದ ಸ್ವಲ್ಪಮಟ್ಟಿಗೆ ರಕ್ಷಣೆ ಒದಗಿಸುವ ಸಾಧ್ಯತೆಯ ಬಗ್ಗೆ ಭರವಸೆ ಉಂಟುಮಾಡಿದೆ.

(ಎಫ್) ೧೯೮೬ರ ಅಕ್ಟೋಬರ್ ೧ ರಂದು ಧಾರವಾಡದಲ್ಲಿ ಎರಡನೇ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗಿದೆ. ಈ ವಿಶ್ವವಿದ್ಯಾನಿಲಯವು ಉತ್ತರ ಕರ್ನಾಟಕ ವಿಶೇಷವಾಗಿ ರಾಜ್ಯದ ಈ ಭಾಗದಲ್ಲಿರುವ ಕಪ್ಪು ಮಣ್ಣಿನ ಪ್ರದೇಶದ ಕೃಷಿ ಅಭಿವೃದ್ಧಿ ಮತ್ತು ಸಂಬಂಧಪಟ್ಟ ಕ್ಷೇತ್ರಗಳ ಸಮಸ್ಯೆಗಳಿಗೆ ಅಧಿಕ ಗಮನ ನೀಡುತ್ತದೆ.

(ಜಿ) ಸರ್ಕಾರವು ನೀರಾವರಿ ಯೋಜನೆಗಳಿಗೆ ನೀಡುತ್ತಿರುವ ಆಗ್ರ ಪ್ರಾಶಸ್ತ್ಯವು ಮುಂದುವರಿದಿದೆ. ೧೯೮೬ರ ಮಾರ್ಚ್ ಅಂತ್ಯದವರೆಗೆ ಸೃಜಿಸಲಾದ ನೀರಾವರಿ ಸಾಮರ್ಥ್ಯ ೨೫.೭೩ ಲಕ್ಷ ಹೆಕ್ಟೇರ್ ಗಳಷ್ಟಾಗಿದ್ದು ಇವುಗಳ ಪೈಕಿ ದೊಡ್ಡ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಆಶ್ರಯದಲ್ಲಿ ೧೨.೨೨ ಲಕ್ಷ ಹೆಕ್ಟೇರುಗಳನ್ನು ಮತ್ತು ಉಳಿದುದನ್ನು ಅಂತರ್ಜಲವನ್ನು ಸೇರಿದಂತೆ ಸಣ್ಣ ನೀರಾವರಿ ಯೋಜನೆಯ ಆಶ್ರಯದಲ್ಲಿ ಸೃಜಿಸಲಾಗಿದೆ. ೧೯೮೬-೮೭ರಲ್ಲಿ ೨೨೧.೨ ಕೋಟಿ ರೂಪಾಯಿಗಳು ಒಟ್ಟು ಬಂಡವಾಳ ವೆಚ್ಚದೊಂದಿಗೆ ದೊಡ್ಡ ಮತ್ತು ಸಣ್ಣ ನೀರಾವರಿ ಮೇರೆಗೆ ೬೫,೦೦೦ ಹೆಕ್ಟೇರುಗಳಷ್ಟು ಮತ್ತು ಸಣ್ಣ ನೀರಾವರಿ ಮೇರೆಗೆ ೫.೦೦೦ ಹೆಕ್ಟೇರುಗಳಷ್ಟು ನೀರಾವರಿ ಸಾಮರ್ಥ್ಯವನ್ನು ರೂಪಿಸಲು ಯೋಜಿಸಲಾಗಿದೆ. ಈ ಗುರಿಯನ್ನು ಸಾಧಿಸಲು ಎಲ್ಲಾ ಯತ್ನಗಳನ್ನು ಮಾಡಲಾಗುತ್ತಿದೆ.

(ಹೆಚ್) ಗ್ರಾಮೀಣ ಜನತೆಗೆ ಆಗತ್ಯವಿರುವ ಇಂಧನ, ಮೇವು ಮತ್ತು ಸಣ್ಣ ಜೌಬೀನೆಯನ್ನು ಪೂರೈಸುವ ಉದ್ದೇಶವನ್ನು ಹೊಂದಿದ ಸಾಮಾಜಿಕ ವನ ನಿರ್ಮಾಣ ಕಾರ್ಯಕ್ರಮಗಳಲ್ಲಿ ಕರ್ನಾಟಕವು ತೀರ ಮುಂದಿದೆ. ವನ ನಿರ್ಮಾಣ ವಲಯದ ಯೋಜನಾ ಕಾರ್ಯಕ್ರಮದ ಮೇರೆಗೆ ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (ಎನ್.ಆರ್.ಇ.ಪಿ) ಮತ್ತು ಗ್ರಾಮೀಣ ಉದ್ಯೋಗಕರಿ ಖಾತ್ರಿ ಕಾರ್ಯಕ್ರಮದಂಥ (ಆರ್.ಎಲ್.ಇ.ಜಿ.ಪಿ) ದಾರಿದ್ರ್ಯ ನಿರೋಧ ಕಾರ್ಯಕ್ರಮಗಳ ಮೇರೆಗೆ ಲಭ್ಯವಿರುವ ನಿಧಿಗಳನ್ನು ಒಟ್ಟುಗೂಡಿಸುತ್ತಿದ್ದೇವೆ. ಪ್ರಸಕ್ತ ವರ್ಷದಲ್ಲಿ ೩೪ ಕೋಟಿ ಯಷ್ಟು ಸಸಿಗಳನ್ನು ಬೆಳೆಸಲಾಗುವುದು. ರೈತರ ತಂಡಗಳು, ಮಹಿಳಾ ಮಂಡಲಗಳು, ಶಾಲೆಗಳು ಮುಂತಾದವುಗಳ ಮೂಲಕ ಸ್ಥಳೀಯ ಸಮುದಾಯಗಳನ್ನು ಈ ಕಾರ್ಯಕ್ರಮದಲ್ಲಿ ತೊಡಗಿಸಲು ಈಗ ಉದ್ದೇಶಪೂರ್ವಕವಾಗಿ ಯತ್ನಿಸಲಾಗುತ್ತಿದೆ. ಹೀಗೆ ಪ್ರಸಕ್ತ ವರ್ಷದಲ್ಲಿ ವಿಕೇಂದ್ರೀಕೃತ ವಲಯದಲ್ಲಿ ೨೦ ಕೋಟಿ ಸಸಿಗಳನ್ನು ಬೆಳೆಸಲಾಗುವುದು. ಸರ್ಕಾರವು ಆದಷ್ಟು ಬೇಗನೆ ಹೊಸ ಪರಿಯೋಜನೆಗಳನ್ನು ಆರಂಭಿಸುವುದು. ಇವುಗಳ ಮೇರೆಗೆ ಅರಣ್ಯ ಇಲಾಖೆಗೆ ವರ್ಗಾಯಿಸಲಾದ 'ಸಿ' ಮತ್ತು 'ಡಿ' ವರ್ಗದ ಜಮೀನು ಇಲ್ಲದ ಕಾರ್ಮಿಕರಿಗೆ ಮತ್ತು ಸಹಾಯ ಧನದ ರೂಪದಲ್ಲಿ ಆರ್ಥಿಕ ನೆರವನ್ನು ಒದಗಿಸಲಾಗುವುದು. ಸಸಿಗಳನ್ನು ನೆಡುವ ಕಾರ್ಯಕ್ರಮದಲ್ಲಿ ಸ್ವಯಂಸೇವಾ ಸಂಘಗಳು ಮತ್ತು ಸಹಕಾರಿ ಸಂಘಗಳು ಸಹ ಪ್ರಮುಖ ಪಾತ್ರ ವಹಿಸುವಂತೆ ಪ್ರೋತ್ಸಾಹಿಸಲಾಗುವುದು.

(ಐ) ಭೂ ಸುಧಾರಣೆಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿದ ವಿವಾದಗಳನ್ನು ಇತ್ಯರ್ಥಗೊಳಿಸುವಲ್ಲಿ ಪ್ರಮುಖ ಕ್ರಮವೆಂದರೆ, ಜಿಲ್ಲಾ ಮಟ್ಟದಲ್ಲಿ ಅಪೀಲು ವಿಚಾರಣಾ ನ್ಯಾಯಾಧಿಕರಣಗಳ ಸ್ಥಾಪನೆ. ಇತ್ಯರ್ಥವಾಗದೆ ಉಳಿದ ಪ್ರಕರಣಗಳು ಹೆಚ್ಚಿಗೆ ಇರುವಂಥ ಜಿಲ್ಲೆಗಳಲ್ಲಿ ಹೆಚ್ಚು ನ್ಯಾಯಾಧಿಕರಣಗಳನ್ನು ಮಂಜೂರು ಮಾಡಲಾಗಿದೆ. ಈ ನ್ಯಾಯಾಧಿಕರಣಗಳ ಸ್ಥಾಪನೆಯು ಉಚ್ಚ ನ್ಯಾಯಾಲಯದಿಂದ ಮರಳಿ ಕಳುಹಿಸಲಾದ ಪ್ರಕರಣಗಳು ತ್ವರಿತವಾಗಿ ಇತ್ಯರ್ಥಗೊಳ್ಳಲು ಸಹಾಯವಾಗುವುದೆಂದು ನಿರೀಕ್ಷಿಸಲಾಗಿದೆ. ಹಿಂದಿನ ಜಮೀನುದಾರರಿಗೆ ಪರಿಹಾರ ಧನವನ್ನು ಬಂಧಪತ್ರಗಳ ಮೂಲಕ ನೀಡುವ ಬದಲಾಗಿ ರಾಷ್ಟ್ರೀಯ ಉಳಿತಾಯ ಪತ್ರಗಳ ರೂಪದಲ್ಲಿ ಸಂದಾಯ ಮಾಡಲು ಅನುಕೂಲವಾಗುವಂತೆ ಕರ್ನಾಟಕ ಭೂ ಸುಧಾರಣಾ ಅಧಿನಿಯಮವನ್ನು ತಿದ್ದುಪಡಿ ಮಾಡಲಾಯಿತೆಂಬುದನ್ನು ನೆನಪಿಗೆ ತಂದುಕೊಳ್ಳಬಹುದು. ಪರಿಹಾರ ಧನವನ್ನು ರಾಷ್ಟ್ರೀಯ ಉಳಿತಾಯ ಪತ್ರಗಳ ಮೂಲಕ ಸಂದಾಯ ಮಾಡುವ ಕಾರ್ಯ ಆರಂಭವಾಗಿದೆಯೆಂದು ಮಾನ್ಯ ಸದಸ್ಯರಿಗೆ ತಿಳಿಸಲು ಹರ್ಷಿಸುತ್ತೇನೆ.

(ಜೆ) ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಕರ್ನಾಟಕದ ಸಾಧನೆ ಪ್ರಶಂಸನೀಯ. ೧೯೮೫–೮೬ನೇ ವರ್ಷಕ್ಕಾಗಿ ಗೊತ್ತುಪಡಿಸಿದ್ದ ಗುರಿಗೂ ಹೆಚ್ಚಿಗೆ ಪ್ರಗತಿ ಸಾಧಿಸಿ, ನಮ್ಮ ರಾಜ್ಯವು ಈ ಸಂಬಂಧದಲ್ಲಿ ಒಂದು ಕೋಟಿ ರೂಪಾಯಿ ಬಹುಮಾನ ಪಡೆದಿದೆ. ಪ್ರಸಕ್ತ ವರ್ಷದಲ್ಲಿಯೂ ತೃಪ್ತಿಕರ ಪ್ರಗತಿಯನ್ನು ಸಾಧಿಸಿಕೊಂಡು ಬರಲಾಗುತ್ತಿದೆ. ಕಳೆದ ಒಂದು ವರ್ಷದಲ್ಲಿ ವಿಶೇಷವಾಗಿ ಗ್ರಾಮೀಣ ಔಷಧಾಲಯಗಳಿಗೆ ಮತ್ತು ಆರೋಗ್ಯ ಕೇಂದ್ರಗಳಿಗೆ ಸರಬರಾಜು ಮಾಡಲಾಗುವ ಔಷಧಗಳ ಪ್ರಮಾಣದಲ್ಲಿ ಗಣನೀಯ ಸುಧಾರಣೆ ಉಂಟಾಗಿದೆ. ಮಕ್ಕಳಿಗೆ ರೋಗ ನಿರೋಧಕ ಚುಚ್ಚುಮದ್ದು ಹಾಕುವ ತೀವ್ರ ಕಾರ್ಯಕ್ರಮವನ್ನು ಐದು ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿದೆ.

(ಕೆ) ಜೀವನ ನಿರ್ವಹಣಾ ವೆಚ್ಚದಲ್ಲಿ ಉಂಟಾದ ಹೆಚ್ಚಳವನ್ನು ಗಮನದಲ್ಲಿರಿಸಿಕೊಂಡು ಪಲವಾರು ಉದ್ಯೋಗಗಳಲ್ಲಿ ಕನಿಷ್ಠ ಮಂಜೂರಿಗಳನ್ನು ಪರಿಷ್ಕರಿಸಲಾಗಿದೆ. ಈ ಪರಿಷ್ಕರಣೆಗಳು ನ್ಯಾಯಿಕ ಪರಿಶೀಲನೆಯ ಪರೀಕ್ಷೆಗೂ ಒಳಪಟ್ಟಿದ್ದುವು. ಈಗ ಅವುಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ. ವರ್ಷದಲ್ಲಿ ಒಟ್ಟಾರೆ ಔದ್ಯಮಿಕ ಬಾಂಧವ್ಯಗಳು ಉತ್ತಮವಾಗಿದ್ದುವೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ಕಾರ್ಮಿಕ ಇಲಾಖೆಯು ಸಕಾಲದಲ್ಲಿ ಮಧ್ಯ ಪ್ರವೇಶಿಸಿ ವಿವಾದಗಳ ತೀವ್ರ ಇತ್ಯರ್ಥಕ್ಕೆ ಕಾರಣವಾಗಿದೆ ಎಂಬ ಅಂಶವನ್ನು ಒಪ್ಪಿಕೊಳ್ಳಬೇಕಾಗಿದೆ.

(ಎಲ್) ಬಡ ಕಕ್ಷಿಗಾರನು ತನ್ನ ಮೊಕದ್ದಮೆಯ ಬಗ್ಗೆ ವಿವಿಧ ನ್ಯಾಯಿಕ ಪ್ರಾಧಿಕಾರಗಳ ಮುಂದೆ ಒತ್ತಾಯ ತರಲು ಅವನಿಗೆ ಸಹಾಯ ಒದಗಿಸುವ ಪ್ರಯತ್ನವಾಗಿ ಈಗ ಕಾನೂನು ನೆರವು ಪದ್ಧತಿಯನ್ನು ರಾಜ್ಯದ ಎಲ್ಲೆಡೆಯಲ್ಲೂ ಸ್ಥಾಪಿಸಲಾಗಿದೆ. ಲೋಕ ಅದಾಲತುಗಳನ್ನು ಈ ವರ್ಷ ಆರಂಭಿಸಲಾಗಿದ್ದು, ಇವು ಕಕ್ಷಿಗಾರನಿಗೆ ಕೆಲವು ವರ್ಗಗಳ ವಿವಾದಗಳನ್ನು ಕೂಡಲೇ ಮತ್ತು ಕನಿಷ್ಠ ವೆಚ್ಚದಲ್ಲಿ ಇತ್ಯರ್ಥಪಡಿಸಿಕೊಡುತ್ತವೆ.

8. ಕಳೆದ ವರ್ಷ ಬಜೆಟ್ ಮಂಡನೆಯ ಸಮಯದಲ್ಲಿ ಪ್ರಕಟಿಸಿದಂತೆ ಪರಿಶಿಷ್ಟ ಜಾತಿಯವರ ಪ್ರಯೋಜನಾರ್ಥವಾಗಿ ರೂಪಿಸಿರುವ ವಿಶೇಷ ಘಟಕ ಯೋಜನೆಗಾಗಿ ವಿವಿಧ ಪಲಯಗಳಲ್ಲಿ ಹಣದ ಏರ್ಪಾಟುಗಳನ್ನು ಒಂದುಗೂಡಿಸುವ ಹೊಸದೊಂದು ಕಾರ್ಯವಿಧಾನವನ್ನು ಈ ವರ್ಷ ಆರಂಭಿಸಲಾಗಿದೆ. ಈ ಕಾರ್ಯ ವಿಧಾನವು ವಿಶೇಷ ಘಟಕ ಯೋಜನೆಯ ಮೇರೆಗೆ ವೆಚ್ಚವನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವುದಕ್ಕೆ ಮಾತ್ರವೇ ಅಲ್ಲದೆ, ಕಾರ್ಯಾಚರಣೆಯಲ್ಲಿ ಅಗತ್ಯವೆನಿಸುವ ಬದಲಾವಣೆಮಾಡಿಕೊಳ್ಳಲು ಅವಕಾಶ ನೀಡುತ್ತದೆ. ವರ್ಷದಲ್ಲಿ ಆರಂಭಿಸಲಾದ ಮತ್ತೊಂದು ಹೊಸ ಕ್ರಮವೆಂದರೆ, ಸಾಧ್ಯವಿರುವಲ್ಲಿ ಪ್ರದೇಶ ಆಧಾರಿತ ಯೋಜನೆಯ ಪ್ರಸ್ತಾವನ್ನು ಅಂಗೀಕರಿಸುವುದಾಗಿದೆ, ಬಹುಮಟ್ಟಿಗೆ ಪರಿಶಿಷ್ಟ ಜಾತಿಯ ಜನಸಂಖ್ಯೆಯನ್ನು ಅಧಿಕ ಪ್ರಮಾಣದಲ್ಲಿ ಹೊಂದಿರುವಂಥ ಆಯ್ಕೆ ಮಾಡಿದ ಗ್ರಾಮಗಳ ಸಮೂಹಗಳ ಮೇಲೆ ಗರಿಷ್ಠ ಪ್ರಭಾವ ಬೀರುವುದೇ ಇದರ ಉದ್ದೇಶ. ಬಾಡಕಟ್ಟು ಉಪಯೋಜನೆಯ ಮೇರೆಗಿನ ಬಂಡವಾಳ ವೆಚ್ಚವು ಪ್ರಸಕ್ತ ವರ್ಷದಲ್ಲಿ ಎರಡು ಪಟ್ಟಿಗಿಂತಲೂ ಹೆಚ್ಚಾಗಿದೆ. ಈ ತೀವ್ರ ಹೆಚ್ಚಳದ ಸ್ಥಿತಿಯು ಮುಂದಿನ ವರ್ಷವೂ ಮುಂದುವರಿಯುವುದೆಂದು ನಿರೀಕ್ಷಿಸಲಾಗಿದೆ.

9. ಅಲ್ಪಸಂಖ್ಯಾತ ಆಯೋಗದ ಮೊದಲ ತಾತ್ಕಾಲಿಕ ವರದಿಯ ಶಿಫಾರಸುಗಳ ಮೇಲೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವನ್ನು ರಚಿಸಲಾಗಿದೆ. ಅಲ್ಪಸಂಖ್ಯಾತರ ಆಯೋಗವು ಈಗ ತಾನೆ ತನ್ನ ಎರಡನೇ ವರದಿಯನ್ನು ಸಲ್ಲಿಸಿದ್ದು ಅದರ ಶಿಫಾರಸುಗಳನ್ನು ಪರಿಶೀಲಿಸಲಾಗುತ್ತಿದೆ. ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತರಿಗೆ ಒದಗಿಸಲಾಗುವ ರಕ್ಷಣಾ ಕ್ರಮಗಳ ಅನುಷ್ಠಾನದ ಸಂಬಂಧದಲ್ಲಿ ಮಾರ್ಗದರ್ಶನ ನೀಡಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ–ಸಮಿತಿಯೊಂದನ್ನು ರಚಿಸಲಾಗಿದೆ.

10. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಹಿಂದುಳಿದ ವರ್ಗಗಳ ಎರಡನೇ ಆಯೋಗವು ಕೆಲವು ತಿಂಗಳುಗಳ ಹಿಂದೆ ತನ್ನ ವರದಿಯನ್ನು ಸಲ್ಲಿಸಿತ್ತು. ದುರದೃಷ್ಟವಶಾತ್ ಆಯೋಗದ ದೃಷ್ಟಿಕೋನ ಮತ್ತು ಶಿಫಾರಸುಗಳು ಅಂಗೀಕೃತವಾಗಿಲ್ಲ. ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ಸೇವೆಗಳಲ್ಲಿ ಹಿಂದುಳಿದ ವರ್ಗದವರಿಗಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸುವ ಬಗ್ಗೆ ಸರ್ಕಾರವು ತಾತ್ಕಾಲಿಕ ಆದೇಶಗಳನ್ನು ಹೊರಡಿಸಿದೆ. ಸಮಗ್ರ ಸ್ಥಿತಿಗತಿಗಳನ್ನು ಪರಿಶೀಲಿಸಬೇಕಾಗಿದೆ. ಸಮಾಜದ ಎಲ್ಲ ಹಿಂದುಳಿದ ವರ್ಗಗಳ ಜನರ ಹಿತಾಸಕ್ತಿಯನ್ನು ಪೂರ್ಣವಾಗಿ ರಕ್ಷಿಸುವ ಬಗ್ಗೆ ನನ್ನ ಸರ್ಕಾರ ಭರವಸೆ ನೀಡಬಯಸುತ್ತದೆ.

11. ನಾನು ಈ ಮೊದಲು ತಿಳಿಸಿದಂತೆ, ಕಳೆದ ವರ್ಷ ಬಿದ್ದ ಮಳೆಯು ಸಾಮಾನ್ಯವಾಗಿ ತೃಪ್ತಿಕರವಾಗಿತ್ತು. ದುರದೃಷ್ಟವಶಾತ್ ರಾಜ್ಯದ ಎರಡು ಪ್ರಮುಖ ವಿದ್ಯುತ್ ಜಲಾಶಯಗಳಾದ ಶರಾವತಿ ಮತ್ತು ಕಾಳೀನದಿಯ ನೀರೊದಗುವ ಪ್ರದೇಶಗಳಲ್ಲಿ ಪಾಡಿಕೆಯಂತೆ ಮಳೆ ಬೀಳಲಿಲ್ಲ. ಇದರ ಪರಿಣಾಮವಾಗಿ ಪ್ರಸಕ್ತ ವರ್ಷ ವಿದ್ಯುತ್ ಉತ್ಪಾದನೆಯಲ್ಲಿ ಸುಮಾರು 2000 ಮಿಲಿಯನ್ ಯೂನಿಟ್‌ಗಳಷ್ಟು ಕೊರತೆಯುಂಟಾಗಲಿದೆ. ರಾಯಚೂರು ಶಾಖ ವಿದ್ಯುತ್ ಕೇಂದ್ರದ 210 ಮೆಗಾವಾಟ್ ಉತ್ಪಾದನೆಯ ಎರಡನೇ ಘಟಕವು ಪೂರ್ಣವಾಗಿ ಸ್ಥಿರಗೊಂಡಿಲ್ಲ. ನಾವು ಕೇಂದ್ರದ ವಿದ್ಯುತ್ ಕೇಂದ್ರಗಳಿಂದ ಹಾಗೂ ನೆರೆಹೊರೆಯ ರಾಜ್ಯಗಳಿಂದ ಗಣನೀಯ ಪ್ರಮಾಣದಲ್ಲಿ ಸಹಾಯ ಪಡೆಯುತ್ತಲಿದ್ದೇವೆ. ಹೀಗಿದ್ದರೂ ವಿದ್ಯುತ್ ಬೇಡಿಕೆ ಮತ್ತು ಪೂರೈಕೆಯ ನಡುವೆ ಅಪಾರ ಅಂತರವಿದೆ ಮತ್ತು ವಿದ್ಯುತ್ ಖೋತಾಗಳನ್ನು ಮುಂದುವರಿಸುವುದು ಅನಿವಾರ್ಯವಾಗಿದೆ.. ಆದರೂ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಲ್ಲಿ ಯಾವುದೇ ರೀತಿಯ ನಿಧಾನವಾಗಿಲ್ಲವೆಂಬುದನ್ನು ತಿಳಿಸಬಯಸುತ್ತೇನೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ಸಂಬಂಧದಲ್ಲಿನ ನಮ್ಮ ಅನೇಕ ಪ್ರಸ್ತಾವನೆಗಳು ಭಾರತ ಸರ್ಕಾರದವರ ಬಳಿ ದೀರ್ಘಕಾಲದಿಂದ ಬಾಕಿ ಉಳಿದಿದೆ. ಡೀಸೆಲ್ ಚಾಲಿತ ಯಂತ್ರ ಆಥವಾ ಗ್ಯಾಸ್ ಟರ್ಬೈನುಗಳ ಆಧಾರದ ಎರಡು ಪರಿಯೋಜನೆಗಳನ್ನು ಒಪ್ಪುವ ಸೂಚನೆಗಳು ಇವೆ. ಆದರೆ ಇದುವರೆಗೂ ಯಾವುದೇ ಅಧಿಕೃತ ಸೂಚನೆ ಬಂದಿಲ್ಲ.

12. ಉದ್ಯಮಗಳು ವಿದ್ಯುತ್ ಖೋತಾದ ಆಘಾತವನ್ನು ಎದುರಿಸಬೇಕಾಯಿತು. ಬಾಧಿತ ವಿದ್ಯುತ್ ಉತ್ಪಾದನೆ ಮೇಲೆ ಪರಿಹಾರ ನೀಡುವ ಮೂಲಕ ಈ ಸ್ಥಿತಿಯನ್ನು ಸುಧಾರಿಸಲು ಸರ್ಕಾರ ಯತ್ನಿಸಿದೆ. ಇದರಿಂದ ಸ್ವಲ್ಪ ಮಟ್ಟಿಗೆ ಸಹಾಯವಾಗಿದೆ. ಮಾನ್ಯ ಸದಸ್ಯರು ತಿಳಿದಿರುವಂತೆ ನನ್ನ ಸರ್ಕಾರದ ತಾತ್ಕಾಲಿಕ ಕಾರ್ಯನೀತಿಯ ಎರಡು ಪ್ರಮುಖ ತತ್ವಗಳೆಂದರೆ, ಅಧಿಕ ಪ್ರಮಾಣದ ವಿದ್ಯುತ್ ಅಗತ್ಯವಿರುವ ಹೊಸ ಉದ್ಯಮಗಳಿಗೆ ಉತ್ತೇಜನ ನೀಡದಿರುವುದು ಮತ್ತು ಉದ್ಯಮವನ್ನು ರಾಜ್ಯದ ವಿವಿಧ ಭಾಗಗಳಿಗೆ ಪಸರಿಸುವುದು. ಸಣ್ಣ ಪ್ರಮಾಣದ ಉದ್ಯಮಗಳಿಗೆ ಪ್ರೋತ್ಸಾಹ ನೀಡುವುದಲ್ಲದೆ, ಹೊಸ ಸಾಹಸೋದ್ಯಮಿಗಳಿಗೆ ವಿಶೇಷ ಪ್ರೋತ್ಸಾಹಕಗಳನ್ನೂ ನೀಡಲಾಗುತ್ತಿದೆ. ಸಣ್ಣ ಪ್ರಮಾಣದ ಉದ್ಯಮಗಳ ಸ್ಥಾಪನೆಯಲ್ಲಿ ತೃಪ್ತಿಕರ ಪ್ರಗತಿ ಆಗಿದೆ. ಆದರೆ ಉದ್ಯಮಗಳು ರಾಜ್ಯದ ವಿವಿಧ ಭಾಗಗಳಲ್ಲಿ ಸಮಗ್ರವಾಗಿ ಪಸರಿಸಿವೆ ಎಂಬ ಬಗ್ಗೆ ನಾವು ಸಮಾಧಾನ ಹೊಂದಲು ಇನ್ನೂ ಸಾಕಷ್ಟು ಕಾಲ ಹಿಡಿಯಬಹುದು.

13. ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುವಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಲಾಗಿದೆ. ಜಿಲ್ಲಾ ಮತ್ತು ಕೆಳಗಿನ ಹಂತಗಳ ಕಛೇರಿಗಳಲ್ಲಿ ಟಿಪ್ಪಣಿಗಳನ್ನು ತಯಾರಿಸುವಲ್ಲಿ ಮತ್ತು ಪತ್ರ ವ್ಯವಹಾರಗಳಲ್ಲಿ ಕನ್ನಡವನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಸಂವಿಧಾನದ ಆಥವಾ ನ್ಯಾಯಿಕ ಅಗತ್ಯತೆಗಳನ್ನು ಪೂರೈಸುವ ಉದ್ದೇಶಕ್ಕಾಗಿ ಇಂಗ್ಲೀಷ್‌ನ ಬಳಕೆ ಆಜ್ಞಾಪಕವಾಗಿದ್ದ ಹೊರತು, ರಾಜ್ಯದ ಕೇಂದ್ರ ಕಛೇರಿಗಳಲ್ಲಿ ಸಹ ಕನ್ನಡದ ಬಳಕೆಯಲ್ಲಿ ತೀವ್ರ ಪ್ರಗತಿ ಉಂಟಾಗಿದೆ. ಪ್ರಸ್ತುತ ಇಲಾಖಾ ಪಾರಿಭಾಷಿಕ ಶಬ್ದಕೋಶಗಳನ್ನು ಪರಿಷ್ಕರಿಸುವ ಮತ್ತು ಸರಳಗೊಳಿಸುವ ಕೆಲಸ ಪ್ರಗತಿಯಲ್ಲಿದೆ. ರಾಜ್ಯ ಆಧಿನಿಯಮಗಳನ್ನು ಈಗಾಗಲೇ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಕ್ಕೆ ಭಾಷಾಂತರಿಸಲಾಗಿದೆ. ಹೊಸ ವಿಧೇಯಕಗಳನ್ನು ಮೂಲತಃ ಕನ್ನಡದಲ್ಲಿಯೇ ರಚಿಸಲಾಗುತ್ತಿದೆ. ಸರ್ಕಾರವು ಮುಂಬರುವ ವರ್ಷದಲ್ಲಿ ಇಂಗ್ಲೀಷ್ ಬೆರಳಚ್ಚು ಯಂತ್ರಗಳ ಬದಲಾಗಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಪೂರೈಸುವ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

14. ನನ್ನ ಸರ್ಕಾರವು ಸರ್ಕಾರಿ ನೌಕರರ ಯೋಗಕ್ಷೇಮದ ಬಗ್ಗೆ ಹೊಂದಿರುವ ಹಿತಾಸಕ್ತಿಯ ಕುರಿತು ಪುನಃ ಹೇಳಬೇಕಾಗಿಲ್ಲ. ಕಳೆದ ಬಜೆಟ್‌ನಲ್ಲಿ ಪ್ರಕಟಿಸಿದ ಗಣನೀಯ ಪರಿಹಾರ ಮತ್ತು ರಿಯಾಯಿತಿಗಳಲ್ಲದೆ ಸರ್ಕಾರವು ಮೂರನೇ ವೇತನ ಆಯೋಗವನ್ನು ರಚಿಸಿತು. ಆಯೋಗವು ತನ್ನ

ವರದಿಯನ್ನು ಈಗ ಸಲ್ಲಿಸಿದ್ದು, ಸರ್ಕಾರವು ಆಯೋಗದ ಪ್ರಧಾನ ಶಿಫಾರಸುಗಳನ್ನು ಸಾಮಾನ್ಯವಾಗಿ ಒಪ್ಪಿಕೊಂಡಿದೆ ಮತ್ತು ಆಜ್ಞೆಗಳನ್ನು ಈ ವರ್ಷದ ಜನವರಿ ಒಂದನೇ ದಿನಾಂಕದಿಂದ ಜಾರಿಗೆ ತರಲಿದೆ. ನಿರೀಕ್ಷಿಸಬಹುದಾದಂಥೆ ಇತರ ಉದ್ಯೋಗಿ ವೃಂದಗಳಿಗೆ ಸಂಬಂಧಿಸಿದಂತೆ ತಮ್ಮ ಸ್ಥಾನಕ್ಕೆ ಭಾಧಕ ವುಂಟಾಗಿದೆ ಎಂಬ ಕಾರಣಕ್ಕಾಗಿ ಕೆಲವು ಉದ್ಯೋಗಿ ವೃಂದಗಳ ನೌಕರರು, ಆಯೋಗದ ಶಿಫಾರಸು ಗಳಿಂದ ಅತೃಪ್ತರಾಗಿದ್ದಾರೆ. ಈ ಪಾಸವಿಗಳನ್ನು ಪರಿಶೀಲಿಸಲು ಸರ್ಕಾರವು ಒಂದು ಅಧಿಕಾರಿಗಳ ಸಮಿತಿಯನ್ನು ರಚಿಸುವುದು. ವೇತನ ಆಯೋಗದ ಶಿಫಾರಸುಗಳಿಂದಾಗಿ ರಾಜ್ಯ ಸರ್ಕಾರದ ಮೇಲೆ ಹಣಕಾಸಿನ ಸಂಬಂಧದಲ್ಲಿ ಹೆಚ್ಚಿನ ಹೊರೆಯುಂಟಾಗಿದ್ದರೂ ಆಯೋಗದ ಶಿಫಾರಸುಗಳನ್ನು ಒಪ್ಪಿ ಕೊಳ್ಳುವಲ್ಲಿ ಯಾವುದೇ ವಿಳಂಬ ಉಂಟಾಗಿಲ್ಲ. ಇದಕ್ಕೆ ಪ್ರತಿಯಾಗಿ ಸರ್ಕಾರೀ ನೌಕರರು ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸುವರೆಂದೂ ಕರ್ನಾಟಕದ ಜನತೆಗೆ ಉತ್ತಮ ಸೇವೆ ನೀಡುವರೆಂದೂ ಸರ್ಕಾರ ನಿರೀಕ್ಷಿಸುತ್ತದೆ.

15. ಮಾನ್ಯ ಸದಸ್ಯರೇ, ನಾನೀಗ ನನ್ನ ಭಾಷಣವನ್ನು ಮುಗಿಸಬಯಸುತ್ತೇನೆ. ವಿಧಾನ ಮಂಡಲದ ಬಜೆಟ್ ಅಧಿವೇಶನದಲ್ಲಿ ಬಹಳಷ್ಟು ಕಾರ್ಯಕಲಾಪಗಳಿವೆ. ಬಜೆಟ್‌ಗೆ ಒಪ್ಪಿಗೆ ನೀಡು ವುದಲ್ಲದೆ ಅನೇಕ ವಿಧಾಯಿ ವಿಷಯಗಳನ್ನು ನೀವು ಪರಿಶೀಲಿಸಲಿದ್ದೀರಿ. ನಿಮ್ಮ ಚರ್ಚೆಗಳನ್ನು ಚಾಗರೂಕತೆಯಿಂದ ಮತ್ತು ತ್ವರಿತವಾಗಿ ನಿರ್ವಹಿಸುವಿರೆಂಬ ಭರವಸೆ ನನಗಿದೆ.

16. ಮುಂಬರುವ ಅಧಿವೇಶನದಲ್ಲಿ ನಿಮಗೆ ಸಂಪೂರ್ಣ ಯಶಸ್ಸು ದೊರೆಯಲೆಂದು ನಾನು ಆಶಿಸುತ್ತೇನೆ.

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಅಪರಾಹ್ನ ೧೨-೦೦ ಗಂಟೆಗೆ ಪುನಃ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ ಬಣಕಾರ್) ಪೀಠವನ್ನಲಂಕರಿಸಿದರು.

ಅಧ್ಯಕ್ಷರು.—ಈಗ ಕಾರ್ಯದರ್ಶಿಯವರು ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುವುದು.

ಕಾರ್ಯದರ್ಶಿ.—ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿ ಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಯಿತು.

ಪ್ರಕಟಣೆಗಳು

ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರನ್ನು ವಿರೋಧಪಕ್ಷದ ನಾಯಕಿಯಾಗಿ ಆರಿಸಿರುವುದರ ಬಗ್ಗೆ

ಅಧ್ಯಕ್ಷರು.—ಶ್ರೀಮತಿ ಕೆ. ಎಸ್ ನಾಗರತ್ನಮ್ಮ ಅವರು ಕರ್ನಾಟಕ ಶಾಸಕಾಂಗದ ಕಾಂಗ್ರೆಸ್ (ಐ) ಪಕ್ಷದ ನಾಯಕರಾಗಿ ಚುನಾಯಿಸಲ್ಪಟ್ಟಿದ್ದಾರೆಂದು ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷದ ಪತಿಯಿಂದ ಪತ್ರ ಬಂದಿದೆ. ಸದನದಲ್ಲಿ ಕಾಂಗ್ರೆಸ್ (ಐ) ಪಕ್ಷವು ೬೬ ಮಂದಿ ಸದಸ್ಯರ ಸಖ್ಯ ಬಲವನ್ನು ಹೊಂದಿದೆ. ಆದುದರಿಂದ ಸದನದಲ್ಲಿ ಕಾಂಗ್ರೆಸ್ (ಐ) ಪಕ್ಷವನ್ನು ವಿರೋಧ ಪಕ್ಷವೆಂದು ಹಾಗೂ ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರನ್ನು ವಿರೋಧ ಪಕ್ಷದ ನಾಯಕಿಯರೆಂದು ನಾನು ಮನ್ನಣೆ ನೀಡಿದ್ದೇನೆ. ಅವರಿಗೆ ಸದನದ ಪರವಾಗಿ ಅಭಿನಂದನೆಗಳು.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಕಾಂಗ್ರೆಸ್ ಪಕ್ಷದ ನಾಯಕರಾಗಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರನ್ನು ಇಲ್ಲಿ ತಾವು ಘೋಷಿಸಿದ್ದೀರಿ. ಬಹುಶಃ ಶ್ರೀಮತಿ ನಾಗರತ್ನಮ್ಮನವರು ಈ ಒಂದು ಸ್ಥಾನಕ್ಕೆ ಎಂದೋ ಅರ್ಹರಾಗಿರಬೇಕಾಗಿತ್ತು. ಅವರು ಈ ಸಭೆಯ ಅಧ್ಯಕ್ಷರಾಗಿ ಬಹಳ ವರ್ಷಗಳಕಾಲ ಇದ್ದರು. ಅವರು ಇಲ್ಲಿ ಪ್ರಥಮ ಅಧ್ಯಕ್ಷಣಿ ಯಾಗಿ ಅತ್ಯಂತ ಯಶಸ್ವಿಯಾಗಿ ಈ ಸಭೆಯನ್ನು ನಡಿಸಿಕೊಂಡು ಹೋಗಿರತಕ್ಕಂಥ ಒಂದು ಕೀರ್ತಿ